ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ
ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾರ, ಬೆಂಗಳೂರು

ವೆಬ್‌ಸೈಟ್ : www.kstacademy.in

ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ ಧಾರವಾಡ

ವೆಬ್‌ಸೈಟ್ : www.kud.ac.in

ಹಾಗೂ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ

ವೆಬ್‌ಸೈಟ್ : www.dharwadsciencecentre.org

ಇವರ ಸಹಯೋಗದೊಂದಿಗೆ

ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಕೇಂದ್ರ ವಿಷಯ : ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆ – ಕರ್ನಾಟಕದ ಕೊಡುಗೆ

ದಿನಾಂಕ : 23 ಮತ್ತು 24 ನವೆಂಬರ್ 2018
(ಶುಕ್ರವಾರ ಮತ್ತು ಶನಿವಾರ)

ಸ್ಥಳ : ಸುವರ್ಣ ಮಹೋತ್ಸವ ಸಭಾಂಗಣ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ.

ಅಧಿವೇಶನಗಳು :

* ಬಾಹ್ಯಾಕಾಶ * ಆಹಾರ ತಂತ್ರಜ್ಞಾನ * ವಿದ್ಯುನ್ಮಾನ * ಆರೋಗ್ಯ * ಮಾಹಿತಿ ತಂತ್ರಜ್ಞಾನ * ಜೈವಿಕ ತಂತ್ರಜ್ಞಾನ * ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು * ಉನ್ನತ ಶಿಕ್ಷಣದ ಅಗತ್ಯತೆ ಮತ್ತು ಸಾಧ್ಯತೆ * ಕನ್ನಡ ಮತ್ತು ಡಿಜಿಟಲ್ ತಂತ್ರಜ್ಞಾನ * ಕನ್ನಡದಲ್ಲಿ ವಿಜ್ಞಾನ ಕವಿತೆಗಳ ವಾಚನ ಸ್ಪರ್ಧೆ.

ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

ಪ್ರತಿನಿಧಿಗಳು ತಮ್ಮ ಸಂಶೋಧನಾ ಫಲಿತಾಂಶವನ್ನು ಕನ್ನಡದಲ್ಲಿ ಪ್ರಾತಕ್ಷಿಕೆಗಳ ಮೂಲಕ ಪ್ರಸ್ತುತಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಕಲ್ಪಿಸಿದೆ. ಮೂಲ ಮತ್ತು ಅನ್ವಯಿಕ ವಿಜ್ಞಾನಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಪ್ರಾತ್ಯಕ್ಷಿಕೆಗಳನ್ನು ಮಂಡಿಸಬಹುದಾಗಿದೆ.

ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನ : ಪ್ರಥಮ – ರೂ. 10,000/–, ದ್ವಿತೀಯ – ರೂ. 7,500/–, ತೃತೀಯ – ರೂ. 5,000/–

ಸಾರಾಂಶದ ಸಲ್ಲಿಕೆ ಮತ್ತು ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

* ಪ್ರಾತ್ಯಕ್ಷಿಕೆಯ ಸಾರಾಂಶವನ್ನು ಕನ್ನಡದಲ್ಲಿ 750 ಪದಗಳಿಗೆ ಮೀರದಂತೆ ಸಲ್ಲಿಸುವುದು.
* ಸಾರಾಂಶವನ್ನು ನುಡಿ o5e ಅಕ್ಷರದಲ್ಲಿ ಬೆರಳಚ್ಚು ಮಾಡಿಸಿ,
ಇ–ಅಂಚೆ ಮೂಲಕ kstakannadacon@gmail.com and drsc.kan.conf@gmail.com ಗೆ ಸಲ್ಲಿಸುವುದು.
* ಸಾರಾಂಶವನ್ನು ಸಲ್ಲಿಸಲು ಕೊನೆಯ ದಿನಾಂಕ 10ನೇ ನವೆಂಬರ್ 2018 (ಶನಿವಾರ)

ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್‌ಸೈಟ್‌ಗೆ ಭೇಟಿ ನೀಡಿ : www.dharwadsciencecentre.org ದೂರವಾಣಿ ಸಂ. 0836 – 2215482

ಡಾ. ಎ. ಎಂ. ರಮೇಶ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ ಬೆಂಗಳೂರು

ಡಾ. ಕೆ. ಬಿ. ಗುಡಸಿ
ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಹಾಗೂ ನಿರ್ದೇಶಕರು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಪಾವಟೆನಗರ, ಧಾರವಾಡ.

ಸಮ್ಮೇಳನದ ವಿವಿಧ ಅಧಿವೇಶನಗಳು

* ಕನ್ನಡದಲ್ಲಿ ಪಾಂಡಿತ್ಯಪೂರ್ಣ ಉಪನ್ಯಾಸಗಳನ್ನು ಖ್ಯಾತ ಸಂಪನ್ಮೂಲ ತಜ್ಞರುಗಳಿಂದ ಈ ಕೆಳಕಂಡ ವಿಷಯಗಳ ಮೇಲೆ ಏರ್ಪಡಿಸಲಾಗುವುದು:
  - * ಬಾಹ್ಯಾಕಾಶ
  - * ಆರೋಗ್ಯ
  - * ಆಹಾರ ತಂತ್ರಜ್ಞಾನ
  - * ಮಾಹಿತಿ ತಂತ್ರಜ್ಞಾನ
  - * ವಿದ್ಯುನ್ಮಾನ
  - * ಜೈವಿಕ ತಂತ್ರಜ್ಞಾನ
* ಅಲ್ಲದೆ, ಸಮ್ಮೇಳನದಲ್ಲಿ ಈ ಕೆಳಕಂಡ ವಿಷಯಗಳಲ್ಲಿ ವಿಚಾರ ಗೋಷ್ಠಿಗಳನ್ನು ಸಹ ಆಯೋಜಿಸಲಾಗುವುದು.:
  - ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಮಹಿಳೆಯರು
  - ಉನ್ನತ ಶಿಕ್ಷಣದ ಅಗತ್ಯತೆ ಮತ್ತು ಸಾಧ್ಯತೆ
  - ಕನ್ನಡ ಮತ್ತು ಡಿಜಿಟಲ್ ತಂತ್ರಜ್ಞಾನ
* ಕನ್ನಡದಲ್ಲಿ ವಿಜ್ಞಾನ ಕವಿತೆಗಳ ವಾಚನ ಸ್ಪರ್ಧೆಗೆ ಒಂದು ಕವಿ ಗೋಷ್ಠಿಯನ್ನು ಸಹ ಏರ್ಪಡಿಸಲಾಗುತ್ತಿದೆ.

ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

ಪ್ರತಿನಿಧಿಗಳು ತಮ್ಮ ಸಂಶೋಧನಾ ಫಲಿತಾಂಶವನ್ನು ಕನ್ನಡದಲ್ಲಿ ಪ್ರಾತಕ್ಷಿಕೆಗಳ ಮೂಲಕ ಪ್ರಸ್ತುತಪಡಿಸಲು ಸಮ್ಮೇಳನವು ಒಂದು ವೇದಿಕೆಯನ್ನು ಕಲ್ಪಿಸಿದೆ. ಮೂಲ ಮತ್ತು ಅನ್ವಯಿಕ ವಿಜ್ಞಾನಗಳಿಗೆ ಸಂಬಂಧಿಸಿದ ಯಾವುದೇ ವಿಷಯದ ಪ್ರಾತ್ಯಕ್ಷಿಕೆಗಳನ್ನು ಮಂಡಿಸಬಹುದಾಗಿದೆ. ವೈಜ್ಞಾನಿಕ ಸಂಶೋಧನೆಗಳಿಗೆ ಪ್ರೋತ್ಸಾಹವನ್ನು ನೀಡುವ ಸಲುವಾಗಿ ಅತ್ಯುತ್ತಮ ಪ್ರಾತ್ಯಕ್ಷಿಕೆಗಳಿಗೆ ಬಹುಮಾನವನ್ನು ಕೆಳಕಂಡಂತೆ ನೀಡಲಾಗುವುದು.

ಪ್ರಥಮ ಬಹುಮಾನ – ರೂ. 10,000/–
ದ್ವಿತೀಯ ಬಹುಮಾನ– ರೂ. 7,500/–
ತೃತೀಯ ಬಹುಮಾನ– ರೂ. 5,000/–

ಅಕಾಡೆಮಿಯ ಸದಸ್ಯರು ಮತ್ತು ವಿಶ್ವವಿದ್ಯಾಲಯ ಪ್ರಾಧ್ಯಾಪಕರುಗಳನ್ನು ಒಳಗೊಂಡ ತಜ್ಞ ಸಮಿತಿಯು ಅತ್ಯುತ್ತಮವಾದ ಪ್ರಾತ್ಯಕ್ಷಿಕೆಗಳನ್ನು ಬಹುಮಾನಕ್ಕೆ ಆಯ್ಕೆ ಮಾಡಲಿದೆ.

ವೈಜ್ಞಾನಿಕ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸಲು ಮಾನದಂಡ

ಪ್ರಾತ್ಯಕ್ಷಿಕೆ ಅಧಿವೇಶನಕ್ಕೆ ಆಯ್ಕೆಯಾದ ಪ್ರಾತ್ಯಕ್ಷಿಕೆಗಳನ್ನು ಪ್ರದರ್ಶಿಸಲು ಸೂಕ್ತ ಸ್ಥಳಾವಕಾಶವನ್ನು ನೀಡಲಾಗುವುದು (ಪ್ರತಿ ಪ್ರಾತ್ಯಕ್ಷಿಕೆಗೆ 3 x 2 ½ ಅಡಿ ಜಾಗ). ಸಮ್ಮೇಳನದ ಸಮಯದಲ್ಲಿ ಎಲ್ಲಾ ಪ್ರಾತ್ಯಕ್ಷಿಕೆಗಳನ್ನು ಮೊದಲ ಲೇಖಕರೇ ಪ್ರಸ್ತುತ ಪಡಿಸಬೇಕು. ಒಬ್ಬ ಲೇಖಕರು ಒಂದೇ ಪ್ರಾತ್ಯಕ್ಷಿಕೆಯನ್ನು ಸಲ್ಲಿಸುವುದು. ತಜ್ಞರು ಆಯ್ಕೆ ಮಾಡಿದ ಪ್ರಾತ್ಯಕ್ಷಿಕೆಗಳನ್ನು 2018ರ ನವೆಂಬರ್ 23 ರಂದು (ಶುಕ್ರವಾರ) ಬೆಳಿಗ್ಗೆ 8.30ಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಪ್ರದರ್ಶನಕ್ಕೆ ಇಡಲಾಗುವುದು.

ಸಮ್ಮೇಳನದ ಪ್ರತಿನಿಧಿಗಳು ಪ್ರಾತ್ಯಕ್ಷಿಕೆಗಳನ್ನು ಚಹಾ ವಿರಾಮ ಮತ್ತು ಭೋಜನ ವಿರಾಮ ಸಮಯದಲ್ಲಿ ವೀಕ್ಷಿಸಲು ಅನುವು ಮಾಡಿಕೊಡಬೇಕಾಗಿದ್ದು, ಈ ಸಮಯದಲ್ಲಿ ಲೇಖಕರು ತಮ್ಮ ಪ್ರಾತ್ಯಕ್ಷಿಕೆಯ ಬಳಿಯಿದ್ದು, ಪ್ರತಿನಿಧಿಗಳೊಂದಿಗೆ ಚರ್ಚಿಸುವುದು.

ಪ್ರಾತ್ಯಕ್ಷಿಕೆಗಳನ್ನು 2018ರ ನವೆಂಬರ್ 24ರಂದು (ಶನಿವಾರ) ಸಂಜೆ 5.00 ಗಂಟೆಗೆ ತೆಗೆಯಬಹುದಾಗಿದೆ.

ಸಾರಾಂಶದ ಸಲ್ಲಿಕೆ ಮತ್ತು ಪ್ರಾತ್ಯಕ್ಷಿಕೆಗಳ ಪ್ರಸ್ತುತಿ

- ಪ್ರಾತ್ಯಕ್ಷಿಕೆಯ ಸಾರಾಂಶವನ್ನು ಕನ್ನಡದಲ್ಲಿ 750 ಪದಗಳಿಗೆ ಮೀರದಂತೆ ಸಲ್ಲಿಸುವುದು.
- ಸಾರಾಂಶವನ್ನು ನುಡಿ o5e ಅಕ್ಷರದಲ್ಲಿ ಬೆರಳಚ್ಚು ಮಾಡಿಸಿ, ಇ–ಅಂಚೆ ಮೂಲಕ **kstakannadacon@gmail.com and drsc.kan.conf@gmail.com** ಗೆ ಸಲ್ಲಿಸುವುದು.
- ಸಾರಾಂಶವನ್ನು ಸಲ್ಲಿಸಲು ಕೊನೆಯ ದಿನಾಂಕ **10ನೇ ನವೆಂಬರ್ 2018 (ಶನಿವಾರ)**
- ನಿಗದಿತ ದಿನಾಂಕದ ನಂತರ ಸಲ್ಲಿಸುವ ಸಾರಾಂಶಗಳನ್ನು ಪರಿಗಣಿಸಲಾಗುವುದಿಲ್ಲ. ಲೇಖಕರು ತಮ್ಮ ಅಂಚೆ ವಿಳಾಸ, ಇ–ಅಂಚೆ, ಫ್ಯಾಕ್ಸ್ ಮತ್ತು ಮೊಬೈಲ್ ಸಂಖ್ಯೆಗಳನ್ನು ನೀಡುವುದು.
- ಸಲ್ಲಿಕೆಯಾದ ವೈಜ್ಞಾನಿಕ ಸಾರಾಂಶಗಳನ್ನು ಸ್ವೀಕರಿಸುವ ಅಥವಾ ತಿರಸ್ಕರಿಸುವ ಅಂತಿಮ ತೀರ್ಮಾನ ಆಯ್ಕೆ ಸಮಿತಿಯದ್ದಾಗಿರುತ್ತದೆ.
- ಈಗಾಗಲೇ ಪ್ರಕಟಿಸಿರುವ ಅಥವಾ ಬೇರೆಡೆ ಪ್ರಸ್ತುತ ಪಡಿಸಿರುವ ಅಥವಾ ಅಕಾಡೆಮಿಯ ಸಮ್ಮೇಳನಗಳಲ್ಲಿ ಬಹುಮಾನಿತ ಪ್ರಾತ್ಯಕ್ಷಿಕೆಗಳನ್ನು ಸಲ್ಲಿಸುವಂತಿಲ್ಲ.
- ಪ್ರಾತ್ಯಕ್ಷಿಕೆಯು ಯಾವುದೇ ರೀತಿಯ ನಕಲು ಎಂದು ಕಂಡು ಬಂದಲ್ಲಿ ಅನರ್ಹಗೊಳಿಸಲಾಗುವುದು.
- ಲೇಖಕರು ವೈಜ್ಞಾನಿಕ ಸಾರಾಂಶ/ ಪ್ರಾತ್ಯಕ್ಷಿಕೆ ಯಾವ ವಿಷಯದಡಿ ಬರುವುದೆಂಬುದನ್ನು ನಮೂದಿಸುವುದು.

ಪ್ರಾತ್ಯಕ್ಷಿಕೆಗಳನ್ನು ವಿಷಯ ತಜ್ಞರು ಸಂಶೋಧನೆ, ವಸ್ತುನಿಷ್ಠತೆ, ಸಮಾಜಕ್ಕೆ ಉಪಯುಕ್ತತೆ ಮತ್ತು ಪ್ರಸ್ತುತಿಯ ಗುಣಮಟ್ಟವನ್ನು ಆಧರಿಸಿ ಮೌಲ್ಯಮಾಪನ ಮಾಡಿ, ನಗದು ಬಹುಮಾನಕ್ಕೆ ಆಯ್ಕೆ ಮಾಡಲಿದ್ದಾರೆ. ಲೇಖಕರಿಂದ ವೈಜ್ಞಾನಿಕ ಸಾರಾಂಶ / ಪ್ರಾತ್ಯಕ್ಷಿಕೆ ಬೇರೆಲ್ಲೂ ಪ್ರಕಟಿಸಿಲ್ಲ ಎಂಬುದರ ಬಗ್ಗೆ ಸ್ವಯಂ ಪ್ರಮಾಣೀಕರಣ/ಸ್ವಯಂ ಘೋಷಣೆ ನೀಡಬೇಕಾಗುವುದು. ಸಂಶೋಧನಾ ವಿದ್ಯಾರ್ಥಿಗಳಿಗೆ ಮತ್ತು ಯುವ ಸಂಶೋಧಕರಿಗೆ ಮಾತ್ರ ಅವಕಾಶವಿರುತ್ತದೆ.

ನೋಂದಾವಣೆ

ಸಮ್ಮೇಳನದಲ್ಲಿ ಪ್ರತಿನಿಧಿಗಳಾಗಿ ಭಾಗವಹಿಸಲು ಇಚ್ಛಿಸುವವರು ಅಕಾಡೆಮಿಯ ಅಂತರ್ಜಾಲ ತಾಣ ಅಥವಾ ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರದ ಅಂತರ್ಜಾಲ ತಾಣಗಳಲ್ಲಿ ಲಭ್ಯವಿರುವ ಅರ್ಜಿ ನಮೂನೆಯಲ್ಲಿ ಸಮುಚಿತ ಮಾರ್ಗವಾಗಿ ಸಲ್ಲಿಸತಕ್ಕದ್ದು. ನೊಂದಣಿ ಶುಲ್ಕ ರೂ. 200/–ಗಳನ್ನು (Director, Dharwad Regional Science Centre) ಇವರಿಗೆ DD ಮೂಲಕ ಅಥವಾ ಆನ್‌ಲೈನ್ SBI ಖಾತೆ 32621859641 IFSC Code SBIN0001728 ಗೆ ಸಂದಾಯವಾಗುವಂತೆ ಭರಿಸಬೇಕು.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ :

ಡಾ. ಎ. ಎಂ. ರಮೇಶ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ
ಮೊಬೈಲ್ :91 9845258894 / 91 9686919019
ಇ–ಮೇಲ್: kstakannadacon@gmail.com ವೆಬ್‌ಸೈಟ್ : www.kstacademy.in

ಡಾ. ಕೆ. ಬಿ. ಗುಡಸಿ
ಪ್ರಾಧ್ಯಾಪಕರು, ರಸಾಯನಶಾಸ್ತ್ರ ವಿಭಾಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ ಹಾಗೂ ನಿರ್ದೇಶಕರು, ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ
ಕರ್ನಾಟಕ ವಿಶ್ವವಿದ್ಯಾಲಯ ಆವರಣ, ಪಾವಟೆನಗರ, ಧಾರವಾಡ.
ಇ–ಮೇಲ್: drscs.kud@gmail.com ವೆಬ್‌ಸೈಟ್: dharwadsciencecentre.org
ಮೊಬೈಲ್: 9448571368

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರಕಾರ

ತೋಟಗಾರಿಕೆ ವಿಜ್ಞಾನಗಳ ಕಾಲೇಜು ಆವರಣ, ಜಿ.ಕೆ.ವಿ.ಕೆ.,
ಮೇ. ಸಂದೀಪ್ ಉನ್ನಿಕೃಷ್ಣನ್ ರಸ್ತೆ,
ದೊಡ್ಡ ಬೆಟ್ಟಹಳ್ಳಿ ಬಸ್ಸ್ ನಿಲ್ದಾಣದ ಎದುರು, ವಿದ್ಯಾರಣ್ಯಪುರ ಪೋಸ್ಟ್,
ಬೆಂಗಳೂರು–560 097
ಮೊಬೈಲ್ : 91 9845258894 / 91 9686919019
ವೆಬ್‌ಸೈಟ್ : www.kstacademy.in

ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ ಧಾರವಾಡ

ವೆಬ್‌ಸೈಟ್ : www.kud.ac.in

ಹಾಗೂ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ

ವೆಬ್‌ಸೈಟ್ : www.dharwadsciencecentre.org

ಇವರ ಸಹಯೋಗದೊಂದಿಗೆ

ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಕೇಂದ್ರ ವಿಷಯ :
ವಿಜ್ಞಾನ ಮತ್ತು ತಂತ್ರಜ್ಞಾನ ಸಂಶೋಧನೆ : ಕರ್ನಾಟಕದ ಕೊಡುಗೆ

ದಿನಾಂಕ : 23 ಮತ್ತು 24 ನವೆಂಬರ್ 2018
(ಶುಕ್ರವಾರ ಮತ್ತು ಶನಿವಾರ)

ಸ್ಥಳ :
ಸುವರ್ಣ ಮಹೋತ್ಸವ ಸಭಾಂಗಣ
ಕರ್ನಾಟಕ ವಿಶ್ವವಿದ್ಯಾಲಯ, ಪಾವಟೆನಗರ, ಧಾರವಾಡ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಕರ್ನಾಟಕ ಸರ್ಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಅಂಗಸಂಸ್ಥೆಯಾದ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು 2005ರ ಜುಲೈನಲ್ಲಿ ಸ್ಥಾಪಿಸಲಾಗಿದ್ದು, ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಪದ್ಮವಿಭೂಷಣ ದಿವಂಗತ ಪ್ರೊ. ಯು. ಆರ್. ರಾವ್, ನಿವೃತ್ತ ಅಧ್ಯಕ್ಷರು, ಇಸ್ರೋ/ಕಾರ್ಯದರ್ಶಿ, ಬಾಹ್ಯಾಕಾಶ ಇಲಾಖೆ, ಭಾರತ ಸರ್ಕಾರ ಇವರು ಸಂಸ್ಥಾಪಕ ಅಧ್ಯಕ್ಷರಾಗಿದ್ದರು. ಪ್ರಸ್ತುತ ಪದ್ಮಶ್ರೀ ಪುರಸ್ಕೃತರಾದ ಡಾ. ಎಸ್. ಕೆ. ಶಿವಕುಮಾರ್, ನಿವೃತ್ತ ನಿರ್ದೇಶಕರು, ಇಸ್ರೋ ಸೆಟಲೈಟ್ ಸೆಂಟರ್ (ISAC) ಇವರ ಅಧ್ಯಕ್ಷತೆಯಲ್ಲಿ ಅಕಾಡೆಮಿಯು ಆಗಸ್ಟ್ 2017 ರಿಂದ ಕಾರ್ಯನಿರ್ವಹಿಸುತ್ತಿದ್ದು, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ನಿರ್ದೇಶಕರಾದ ಡಾ. ಹೆಚ್. ಹೊನ್ನೇಗೌಡ ಅವರು ಸದಸ್ಯ ಕಾರ್ಯದರ್ಶಿಯಾಗಿದ್ದಾರೆ. ಖ್ಯಾತ ವಿಜ್ಞಾನಿಗಳು, ಹೆಸರಾಂತ ಶಿಕ್ಷಣ ತಜ್ಞರು ಮತ್ತು ಹಿರಿಯ ಅಡಳಿತಗಾರರು ಪ್ರಸ್ತುತ ಅಕಾಡೆಮಿಯ ಸದಸ್ಯರಾಗಿದ್ದಾರೆ.

ಅಕಾಡೆಮಿಯು ವಿಜ್ಞಾನ ಶಿಕ್ಷಣವನ್ನು ಸಧೃಡಗೊಳಿಸುವ, ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆಯನ್ನು ಬೆಳೆಸುವ ಹಾಗೂ ಜನಸಾಮಾನ್ಯರಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಕಾರ್ಯಕ್ರಮಗಳನ್ನು ಕಳೆದ ಸುಮಾರು 13 ವರ್ಷಗಳಿಂದ ಬಹಳ ಯಶಸ್ವಿಯಾಗಿ ರಾಜ್ಯಾದ್ಯಂತ ಆಯೋಜಿಸಿಕೊಂಡು ಬರುತ್ತಿದ್ದು, ಅವುಗಳಲ್ಲಿ ಅಕಾಡೆಮಿಯ ಸಮ್ಮೇಳನವು ಒಂದು ಪ್ರಮುಖ ಕಾರ್ಯಕ್ರಮವಾಗಿದೆ.

ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ

ಕರ್ನಾಟಕ ರಾಜ್ಯದ ಎರಡನೆಯ ಹಳೆಯ ಮತ್ತು ಉತ್ತರ ಕರ್ನಾಟಕದ ಸಾಂಪ್ರದಾಯಿಕ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಯಾಗಿರುವ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯವು ಬಾಂಬೆ ಪ್ರೆಸಿಡೆನ್ಸಿ ಕಾಯ್ದೆಯಡಿ 1949 ರಲ್ಲಿ ಮುಂಬಯಿಯಲ್ಲಿ ಆರಂಭಗೊಂಡು, 1949 ಅಕ್ಟೋಬರ್ ತಿಂಗಳಲ್ಲಿ ಧಾರವಾಡಕ್ಕೆ ಸ್ಥಳಾಂತರಗೊಂಡು, 1950 ರ ಮಾರ್ಚ್ 1 ರಂದು ಶಾಸನಬದ್ಧ ವಿಶ್ವವಿದ್ಯಾಲಯವಾಯಿತು. ಕರ್ನಾಟಕ ವಿಶ್ವವಿದ್ಯಾಲಯವು ವೈಜ್ಞಾನಿಕ ಸಾಮಾಜಿಕ, ಸಾಹಿತ್ಯಿಕ ಹಾಗೂ ಸಾಂಸ್ಕೃತಿಕ ಸಾಧಕರ, ಸಾಧನೆಗಳ ಅಪೂರ್ವ ಸಂಗಮವಾಗಿದ್ದು, ಭಟ್ನಾಗರ್ ಪ್ರಶಸ್ತಿ ವಿಜೇತರು, ಕಾಮನ್‌ವೆಲ್ತ್ ಸಂಶೋಧಕರು ಅಂತಾರಾಷ್ಟ್ರೀಯ ಸಂದರ್ಶಕರು, ಫುಲ್‌ಬ್ರೈಟ್ ವಿದ್ವಾಂಸರು, ಜ್ಞಾನಪೀಠ ಪ್ರಶಸ್ತಿ ವಿಜೇತರು, ಕವಿ ಶ್ರೇಷ್ಠರು, ಸಂಗೀತಗಾರರು, ಸಮಾಜ ವಿಜ್ಞಾನಿಗಳು ಮುಂತಾದವರಿಂದ ವಿಶ್ವವಿದ್ಯಾಲಯದ ಕೀರ್ತಿಯು ದೇಶದುದ್ದಕ್ಕೂ ವ್ಯಾಪಿಸಿದೆ. 'ನ್ಯಾಕ್' ನಿಂದ 'ಎ' ಗ್ರೇಡ್ ಮಾನ್ಯತೆ, ಯು.ಜಿ.ಸಿ.ಯಿಂದ ಉತ್ಕೃಷ್ಟ ಸಾಮರ್ಥ್ಯವುಳ್ಳ ವಿಶ್ವವಿದ್ಯಾಲಯ ಮನ್ನಣೆ, ಕರ್ನಾಟಕ ರಾಜ್ಯ ವಿಶ್ವವಿದ್ಯಾಲಯ ಶ್ರೇಯಾಂಕಿತ ಪಟ್ಟಿಯಲ್ಲಿ ದ್ವಿತೀಯ ಸ್ಥಾನ, 'ಲಿರಿಯಾ'ದ ಐಪಿಎಲ್ ಸಂಸ್ಥೆಯಿಂದ ಮೌಲಿಕ ಅಂತಾರಾಷ್ಟ್ರೀಯ ಪಾಲುದಾರ ವಿಶ್ವವಿದ್ಯಾಲಯವೆಂಬ ಗೌರವ, ತೃಪ್ತಿಕರ ಎಜ್ ಇಂಡೆಕ್ಸ್ ರೇಟಿಂಗ್ ಹೀಗೆ ಹತ್ತು ಹಲವು ಹಿರಿಮೆ ಗರಿಮೆಗಳನ್ನು ವಿಶ್ವವಿದ್ಯಾಲಯವು ತನ್ನದಾಗಿಸಿಕೊಂಡಿದೆ. ಪ್ರಸ್ತುತ ಭಾರತದ ಪ್ರತಿಷ್ಠಿತ ಹದಿನಾಲ್ಕು ವಿಶ್ವವಿದ್ಯಾಲಯಗಳಲ್ಲಿ ಒಂದಾಗಿರುವ ಕರ್ನಾಟಕ ವಿಶ್ವವಿದ್ಯಾಲಯವು ಹಿಂದುಳಿದ ಉತ್ತರ ಕರ್ನಾಟಕದ ಜನಸಮುದಾಯಗಳ ಸೇವೆಯಲ್ಲಿ ಅವಿರತವಾಗಿ ತನ್ನನ್ನು ತೊಡಗಿಸಿಕೊಂಡಿದ್ದು, ಧಾರವಾಡದ ಮನ್ಸೂರು ಗ್ರಾಮದ ಸಮಗ್ರ ಸಮಾಜೋ-ಆರ್ಥಿಕ ಬೆಳವಣಿಗೆಗಾಗಿ ಮನ್ಸೂರ ಗ್ರಾಮವನ್ನು 'ದತ್ತು ಗ್ರಾಮ'ವಾಗಿ ಸ್ವೀಕರಿಸಿರುವುದಲ್ಲದೆ, ಈ ಭಾಗದಲ್ಲಿ ಅಭಿವೃದ್ಧಿ ಕೇಂದ್ರ, ಕೇಂದ್ರ ಸರಕಾರದ ಸಹಯೋಗದಲ್ಲಿ 'ಕೌಶಲ್ಯಾಭಿವೃದ್ಧಿ ಕೇಂದ್ರ'ವನ್ನು ಆರಂಭಿಸಲಾಗಿದೆ.

ವಿಶ್ವವಿದ್ಯಾಲಯದಿಂದ ಜಾಗತಿಕ ಮಟ್ಟದಲ್ಲಿ ಶಿಕ್ಷಕರ ಮತ್ತು ಶಿಕ್ಷಣದ ಗುಣಮಟ್ಟ ಹೆಚ್ಚಿಸುವ ಎಂ.ಎಚ್.ಆರ್.ಡಿ. ಹಾಗೂ ಯು.ಜಿ.ಸಿಯ 'ಗಿಯಾನ್' ಕಾರ್ಯಕ್ರಮಕ್ಕೆ ಇಷ್ಟರಲ್ಲೇ ಚಾಲನೆ ನೀಡಲಾಗುವುದು. ದೇಶದ ನಿರಂತರ ವಿಸ್ತರವಾಗುತ್ತಿರುವ ತಂತ್ರಜ್ಞಾನ ಅಭಿವೃದ್ಧಿಗೆ ಪೂರಕವಾಗಿ ಕಂಪನಿಗಳು, ಹೂಡಿಕೆದಾರರು ಹಾಗೂ ಸಂಶೋಧನಾ ಆವಿಷ್ಕಾರ ಸಮುದಾಯಗಳನ್ನು ಬೆಸೆಯುವ ಆಸಕ್ತಿಯೊಂದಿಗೆ ಕಂಪನಿಗಳ ಹೂಡಿಕೆಗೆ ಅವಕಾಶ ನೀಡುವುದರ ಮೂಲಕ ಔದ್ಯಮಿಕ ಆಸಕ್ತಿಯೊಂದಿಗೆ ಜ್ಞಾನ ಸಮುದಾಯದ ಒಗ್ಗೂಡಿಸುವಿಕೆಗೆ ವಿಶ್ವವಿದ್ಯಾಲಯವು ದಿಟ್ಟ ಹೆಜ್ಜೆ ಇಟ್ಟಿದೆ. ವಿದ್ಯಾರ್ಥಿಗಳ ವಿದ್ಯುನ್ಮಾನ ಪದ್ಧತಿಗಳ ಕೌಶಲ್ಯಾಭಿವೃದ್ಧಿಗಾಗಿ ಭಾರತೀಯ ವಿದ್ಯುನ್ಮಾನ ಘಟಕ ಕೌಶಲಗಳ ಪರಿಷತ್ತು ಇದರ ಜೊತೆ ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿರುವುದಲ್ಲದೆ, 'ಜನೌಷಧಿ' ಯೋಜನೆಯಡಿ ಯುವ ಪೀಳಿಗೆಯ ಕೌಶಲಾಭಿವೃದ್ಧಿಗಾಗಿ 'ಬ್ಯೂರೋ ಆಫ್ ಫಾರ್ಮ ಪಬ್ಲಿಕ್ ಸೆಕ್ಟರ್ ಅಂಡರ್‌ಟೇಕಿಂಗ್ಸ್' (ಬಿಪಿಪಿಐ) ಜೊತೆಯೂ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಇತ್ತೀಚಿಗೆ ಕರ್ನಾಟಕ ವಿಶ್ವವಿದ್ಯಾಲಯದ ಹಿರಿಯ ಪ್ರಾಧ್ಯಾಪಕರ ತಂಡವೊಂದು ಜರ್ಮನಿ, ಪೋರ್ಚುಗಲ್ ಮತ್ತು ಯು.ಕೆ.ಯಂತಹ ದೇಶಗಳಿಗೆ ಭೇಟಿ ಕೊಟ್ಟು ಅಲ್ಲಿನ ಕೆಲವು ನಾವಿನ್ಯಪೂರ್ಣ ಯೋಜನೆಗಳನ್ನು ನಮ್ಮಲ್ಲಿಯೂ ಕಾರ್ಯರೂಪಕ್ಕೆ ತರುವ ಬಗ್ಗೆ ಚಿಂತನೆ ನಡೆಸಿರುವುದಲ್ಲದೆ, ಬೋಧನೆ ಮತ್ತು ಸಂಶೋಧನಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ 'ಲಿರಿಯಾ'ದ ಪಾಲಿಟೆಕ್ನಿಕ್ ಸಂಸ್ಥೆ ಹಾಗೂ ಕೆಂಬ್ರಿಡ್ಜ್‌ನ ಸಿಡ್ನಿ ಸಸೆಕ್ಸ್ ಕಾಲೇಜಿನ ಜೊತೆಗೆ ವಿಶ್ವವಿದ್ಯಾಲಯವು ಒಡಂಬಡಿಕೆ ಮಾಡಿಕೊಂಡಿದೆ. ಹೀಗೆಯೇ ಬೋಧನೆ, ಸಂಶೋಧನೆಯಂತಹ ಸಮರ್ಪಕ ಕಾರ್ಯಗಳ ಮೂಲಕ ದಾಪುಗಾಲಿಡುತ್ತಿರುವ ಕರ್ನಾಟಕ ವಿಶ್ವವಿದ್ಯಾಲಯದಿಂದ ಮುಂಬರುವ ದಿನಗಳಲ್ಲಿ ಹತ್ತು ಹಲವು ಹೊಸತುಗಳನ್ನು ನಿರೀಕ್ಷಿಸಬಹುದಾಗಿದೆ.

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ

ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರವನ್ನು ರಾಷ್ಟ್ರೀಯ ವಿಜ್ಞಾನ ಮತ್ತು ವಸ್ತು ಸಂಗ್ರಹಾಲಯ ಸಂಸ್ಥೆ ಮತ್ತು ಕರ್ನಾಟಕ ಸರಕಾರದ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಗಳ ಸಹಯೋಗದೊಂದಿಗೆ 27ನೇ ಫೆಬ್ರುವರಿ 2012 ರಂದು ಸ್ಥಾಪಿಸಲಾಗಿದ್ದು, ಇದರ ಮೂಲಕ ಜನಸಾಮಾನ್ಯರು, ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಮೂಲ ವಿಜ್ಞಾನ ಮತ್ತು ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಲು ಸಹಕಾರಿಯಾಗಿದೆ. ಶಿಕ್ಷಕರಿಗೆ, ವಿದ್ಯಾರ್ಥಿಗಳಿಗೆ ಹಾಗೂ ಜನಸಾಮಾನ್ಯರಿಗೆ ಅನೇಕ ವೈಜ್ಞಾನಿಕ ಕಾರ್ಯಕ್ರಮಗಳನ್ನು ಆಯೋಜಿಸಿ ವೈಜ್ಞಾನಿಕ ಮನೋಭಾವವನ್ನು ಬೆಳೆಸಲು ಪ್ರಮುಖ ಪಾತ್ರವಹಿಸಿದೆ. ಜೊತೆಗೆ ಪ್ರೌಢಶಾಲೆಗಳಿಗೆ ವಿಜ್ಞಾನ ಕಿಟ್ ತಯಾರಿಕೆ ಮತ್ತು ಪೂರೈಕೆ, ವಿಜ್ಞಾನ ಪಾರ್ಕ್ ಪ್ರದರ್ಶಿಕೆಗಳ ತಯಾರಿಕೆ ಮತ್ತು ಸ್ಥಾಪನೆ, ಶಿಕ್ಷಕರಿಗೆ ತರಬೇತಿ, ಮಕ್ಕಳಿಗೆ ತರಬೇತಿ ಕಮ್ಮಟ ಇತ್ಯಾದಿ ಕಾರ್ಯಗಳನ್ನು ಮಾಡುತ್ತ ಉತ್ತರ ಕರ್ನಾಟಕದ ಅನೇಕ ಶೈಕ್ಷಣಿಕ ಸಮಸ್ಯೆಗಳನ್ನು ಹೋಗಲಾಡಿಸಲು ವೈಜ್ಞಾನಿಕವಾಗಿ ಚಿಂತನೆ ಮಾಡುತ್ತಿದೆ. ಎಲ್ಲ ಪ್ರೌಢಶಾಲೆಗಳನ್ನು ಸಧೃಢಗೊಳಿಸಲು ಪ್ರಯತ್ನಿಸುತ್ತಿದೆ. ಮುಂದಿನ ದಿನಗಳಲ್ಲಿ 3ಡಿ ಡಿಜಿಟಲ್ ಪ್ಲಾನೇಟೇರಿಯಮ್, ಇನ್ನೋವೇಶನ್ ಹಬ್ ಅಂತಹ ಮಹತ್ವಾಕಾಂಕ್ಷಿ ಯೋಜನೆಗಳನ್ನು ಹಮ್ಮಿಕೊಳ್ಳುತ್ತಿರುವುದು ವಿಶೇಷ. ಈ ಕೇಂದ್ರವು ಧಾರವಾಡದಲ್ಲಿ ಎಲ್ಲರೂ ನೋಡಲೇ ಬೇಕಾದ ಒಂದು ಪ್ರವಾಸ ತಾಣವಾಗಿ ಹೊರ ಹೊಮ್ಮುತ್ತಿದೆ.

ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ವಿಜ್ಞಾನ ಮತ್ತು ತಂತ್ರಜ್ಞಾನಗಳು ಜನಜೀವನದ ಒಂದು ಅವಿಭಾಜ್ಯ ಅಂಗಗಳಾಗಿ ಮನುಷ್ಯನ ಜ್ಞಾನಭಂಡಾರದ ವಿಶೇಷ ಶಾಖೆಗಳಾಗಿ ಅನೂಹ್ಯ ವೇಗದಲ್ಲಿ ಬೆಳೆಯುತ್ತಿವೆ. ಈ ನಿಟ್ಟಿನಲ್ಲಿ ಪ್ರಪಂಚದ ನಿಜ ಸ್ವರೂಪವನ್ನು ಅರ್ಥಮಾಡಿಕೊಳ್ಳುವ ಮಾನವನ ಯತ್ನದಿಂದ ವಿಜ್ಞಾನ ಹುಟ್ಟಿದ್ದು, ಸುತ್ತಮುತ್ತಲ ಪ್ರಪಂಚವನ್ನು ಮನುಷ್ಯನು ತನ್ನ ಸ್ವಂತ ಉಪಯೋಗಕ್ಕಾಗಿ ಬಳಸಿಕೊಳ್ಳುವ ಯತ್ನದಿಂದ ತಂತ್ರಜ್ಞಾನ ಉದಯಿಸಿದೆ. ತಂತ್ರಜ್ಞಾನವನ್ನು ಬೆಳೆಸುವುದು ವಿಜ್ಞಾನ; ವಿಜ್ಞಾನದ ಮುನ್ನಡೆಗೆ ಉತ್ತೇಜನ ನೀಡುವುದು ತಂತ್ರಜ್ಞಾನ. ವಿಜ್ಞಾನ ಮತ್ತು ತಂತ್ರಜ್ಞಾನ ಒಂದಕ್ಕೊಂದು ಪೂರಕವಾಗಿ ಸಮಾಜದ ಶ್ರೇಯೋಭಿವೃದ್ಧಿಗೆ ಅತ್ಯಗತ್ಯವೆನಿಸಿವೆ. ಇವೆರಡು ಕ್ಷೇತ್ರಗಳು ಪ್ರಗತಿಯ ಚಾಲನಾಶಕ್ತಿಗಳಾಗಿ ಸಾಮಾಜಿಕ ಮತ್ತು ಆರ್ಥಿಕ ಸ್ಥಿತಿಗತಿಗಳನ್ನು ಉತ್ತಮಗೊಳಿಸುತ್ತಿವೆ.

ಈ ಹಿನ್ನೆಲೆಯಲ್ಲಿ ವಿಜ್ಞಾನ ವಿವಿಧ ಶಾಖೆಗಳಲ್ಲಿ ಪದವಿ ಮತ್ತು ಸ್ನಾತಕೋತ್ತರ ಪದವಿಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ, ಉಪನ್ಯಾಸಕರಿಗೆ /ಅಧ್ಯಾಪಕರಿಗೆ, ವಿವಿಧ ಇಲಾಖೆಗಳ ಅಧಿಕಾರಿಗಳಿಗೆ ಮತ್ತು ಆಸಕ್ತ ಜನಸಾಮಾನ್ಯರಿಗೆ ಆಧುನಿಕ ಸಂಶೋಧನೆ, ಆವಿಷ್ಕಾರಗಳು ಮತ್ತು ನೂತನ ತಂತ್ರಜ್ಞಾನಗಳ ಬಗ್ಗೆ ಹೆಚ್ಚಿನ ಮಾಹಿತಿಯನ್ನು ನೀಡಿ, ವೈಜ್ಞಾನಿಕ ಅರಿವು ಮೂಡಿಸಲು ಅಕಾಡೆಮಿಯು, ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ಕನ್ನಡದಲ್ಲಿ ಕಳೆದ ವರ್ಷದಿಂದ ಆಯೋಜಿಸುತ್ತಿದೆ.

ಕಾರ್ಯಕ್ರಮದ ಉದ್ದೇಶ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಸಮ್ಮೇಳನದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರಗಳ ಹೊಸ ಹೊಸ ಸಂಶೋಧನೆ, ಮುಂಚೂಣಿಯಲ್ಲಿರುವ ವೈಜ್ಞಾನಿಕ ಕ್ಷೇತ್ರಗಳು, ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ಪೂರಕವಾದ ತಂತ್ರಜ್ಞಾನಗಳು ಹಾಗೂ ಇತರೆ ವೈಜ್ಞಾನಿಕ ವಿಷಯಗಳ ಬಗ್ಗೆ ವಿವಿಧ ಕ್ಷೇತ್ರಗಳ ತಜ್ಞರು, ಪರಿಣತರು ಮತ್ತು ವಿಜ್ಞಾನಿಗಳಿಂದ ಕನ್ನಡದಲ್ಲಿ ಉಪನ್ಯಾಸಗಳನ್ನು ಏರ್ಪಡಿಸಲಾಗುವುದು.

ಈ ಸಮ್ಮೇಳನದ ಮುಖ್ಯ ಉದ್ದೇಶಗಳು :

- ವಿಜ್ಞಾನ ಮತ್ತು ತಂತ್ರಜ್ಞಾನವನ್ನು ಜನಪ್ರಿಯಗೊಳಿಸುವುದು.
- ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಾಗುತ್ತಿರುವ ಸಂಶೋಧನೆಗಳು ಮತ್ತು ಆವಿಷ್ಕಾರಗಳ ಬಗ್ಗೆ ಅರಿವು ಮೂಡಿಸುವುದು.
- ರಾಜ್ಯದ ಸರ್ವತೋಮುಖ ಅಭಿವೃದ್ಧಿಗೆ ವಿಜ್ಞಾನ ಮತ್ತು ತಂತ್ರಜ್ಞಾನಗಳನ್ನು ವಿವಿಧ ಕ್ಷೇತ್ರಗಳಲ್ಲಿ ಬಳಸಿಕೊಳ್ಳುವ ಬಗ್ಗೆ ತಿಳುವಳಿಕೆ ನೀಡುವುದು.
- ಜನಸಾಮಾನ್ಯರಲ್ಲಿ ಆದರಲ್ಲೂ ಮುಖ್ಯವಾಗಿ ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಮನೋಭಾವನೆ ಮೂಡಿಸುವುದು.
- ಜನಸಾಮಾನ್ಯರಲ್ಲಿ ಆಧುನಿಕ ವೈಜ್ಞಾನಿಕ ಸಂಶೋಧನೆಗಳ ಬಗ್ಗೆ ಅರಿವು ಮೂಡಿಸುವುದು.

ವಿಜ್ಞಾನ ಪ್ರಸರಣದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ

ರಾಜ್ಯದಲ್ಲಿ ವಿಜ್ಞಾನ ಪ್ರಸರಣ ಮತ್ತು ಸಂವಹನಕ್ಕೆ ಅನನ್ಯ ಕೊಡುಗೆಯನ್ನು ನೀಡುತ್ತಿರುವ ಹಿರಿಯ ವಿಜ್ಞಾನ ಬರಹಗಾರರಾದ ಡಾ. ಹೆಚ್. ಆರ್. ಕೃಷ್ಣಮೂರ್ತಿ, ನಿವೃತ್ತ ಉಪ ಮಹಾನಿರ್ದೇಶಕರು, ಪ್ರಸಾರ ಭಾರತಿ, ಬೆಂಗಳೂರು ಇವರಿಗೆ ಈ ಸಮ್ಮೇಳನದಲ್ಲಿ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಲಾಗುವುದು. ಈ ಸಮ್ಮೇಳನದ ಉದ್ಘಾಟನಾ ಸಮಾರಂಭದಲ್ಲಿ ಶ್ರೀಯುತರಿಗೆ ರೂ. 50,000/-ಗಳ ನಗದು ಹಾಗೂ ಸನ್ಮಾನ ಪತ್ರವನ್ನು ನೀಡಿ ಗೌರವಿಸಲಾಗುವುದು.